ರಸ್ತೆಗಳ ಅಭಿವೃದ್ಧಿ ವಿಚಾರ

807 - ಶ್ರೀ ಯು.ಕೆ. ಶಾಮಣ್ಣ (ಶೃಂಗೇರಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.?

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಅಭಿವೃದ್ಧಿಗಾಗಿ ಶಾಸಕರ ಕ್ಷೇತ್ರಕ್ಕೆ ಹಣವನ್ನು ನಿಗದಿಪಡಿಸಿರುವುದು ನಿಜವೇ?
ಹಾಗಿದ್ದಲ್ಲಿ ಹಣವೆಷ್ಟು?

ಆ) ಶೃಂಗೇರಿ ಕ್ಷೇತ್ರದಲ್ಲಿ 3 ತಾಲ್ಲೂಕುಗಳಿದ್ದು ರಸ್ತೆ ವಿಸ್ತೀರ್ಣವು ಜಾಸ್ತಿಯಿರುವುದು ನಿಜವೆ?

ಇ) ಹಾಗಿದ್ದಲ್ಲಿ ಈ ರಸ್ತೆಗಳ ಅಭಿವೃದ್ಧಿಗಾಗಿ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಹೌದು. 1991-92ನೇ ಸಾಲಿನಲ್ಲಿ 12.00 ಲಕ್ಷ ರೂ.ಗಳನ್ನು ನಿಗದಿಪಡಿಸಿದೆ.

ಆ) ರಾಜ್ಯ ಹೆದ್ದಾರಿ 65 ಕಿ.ಮೀ. ಮತ್ತು ಜಿಲ್ಲಾ ಮುಖ್ಯ ರಸ್ತೆ 401.20 ಕಿ.ಮೀ. ಇರುತ್ತದೆ.

ಇ) ಈ ಕ್ಷೇತ್ರದಲ್ಲಿ ಅಭಿವೃದ್ಧಿಗೆ 1991-92ರಲ್ಲಿ ನಿಗದಿಪಡಿಸಿದ್ದ 12..00 ಲಕ್ಷ ರೂ.ಗಳ ಅನುದಾನ ಹಾಗೂ 1992-93ನೇ ಸಾಲಿನಲ್ಲಿ ನೀಡಿರುವ 15.00 ಲಕ್ಷ ರೂ.ಗಳ ಅನುದಾನದಲ್ಲಿ ರಸ್ತೆಗಳ ಅಭಿವೃದ್ಧಿಯನ್ನು ಮಾಡಲಾಗುತ್ತಿದೆ. ಅಲ್ಲದೆ ಲಭ್ಯ ಮಾಡಿರುವ ನಿರ್ವಹಣಾ ಅನುದಾನದಲ್ಲಿ ಈ ಕ್ಷೇತ್ರದ ರಸ್ತೆಗಳನ್ನು ಸಂಚಾರಕ್ಕೆ ಅಡಚಣೆ ಆಗದಂತೆ ನಿರ್ವಹಿಸಲಾಗುತ್ತಿದೆ.

ಹುಕ್ಕೇರಿ ತಾಲ್ಲೂಕಿಗೆ ಮಿನಿ ವಿಧಾನಸೌಧದ ಮಂಜೂರಾತಿ.

953 - ಶ್ರೀ ಬಿ. ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿಗೆ ಮಿನಿ ವಿಧಾನಸೌಧ ಮಂಜೂರಾಗಿದೆಯೆ, ಆಗಿದ್ದರೆ ಯಾವಾಗ?

ಆ) ಮಿನಿ ವಿಧಾನ ಸೌಧ ಕಟ್ಟಲು ಸ್ಥಳ ಒದಗಿಸಲಾಗಿದೆಯೇ, ಒದಗಿಸಿದ್ದಲ್ಲಿ ಹಾಗೂ ಇದಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಇಲಾಖೆಯ ಸಚಿವರು) :

ಅ) ಆದೇಶ ಸಂಖ್ಯೆ ಆರ್‌ಡಿ 78 ಡಬ್ಲ್ಯೂಬಿಆರ್ 90 ದಿನಾಂಕ 28-9-92ರ ಆದೇಶದಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಆ) ಹುಕ್ಕೇರಿ ನಗರದ ಸರ್ವೆ ನಂ: 114ರಲ್ಲಿನ ನಿವೇಶನವನ್ನು ಈಗಾಗಲೇ ವಶಪಡಿಸಿಕೊಳ್ಳಲಾಗಿದೆ. ಒಟ್ಟು 45ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಾಣ ಮಾಡಲು ನಿಯಮದ ರೀತ್ಯ ಕ್ರಮ ಕೈಗೊಂಡು ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.